ವರ್ಷವಾಗಿದ್ದರೂ ಈ ರೀತಿ ಹೇಳಿದರೆ, ನಾವು ನಮ್ಮ ಕ್ಷೇತ್ರದಲ್ಲಿ ಜನರಿಗೆ ಏನು ಉತ್ತರ ಹೇಳುವುದಕ್ಕೆ ಆಗುತ್ತದೆ? ತಾವು ದಯಮಾಡಿ ಈ ಸಾಲಿನಲ್ಲಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು:– ಮಾನ್ಯ ಮಂತ್ರಿಗಳೇ, ಇದಕ್ಕೆ ಏನಾದರೂ ಉತ್ತರ ಹೇಳುತ್ತಿರಾ? ಇದನ್ನು ಈ ಸಾಲಿನಲ್ಲೇ ತೆಗೆದುಕೊಳ್ಳುತ್ತಿರಾ?

ಶ್ರೀ ಹೆಚ್. ಆಂಜನೇಯ:– ಮಾನ್ಯ ಅಧ್ಯಕ್ಷರೆ, ಇದನ್ನು ಆದ್ಯತೆಯ ಮೇಲೆ ಈ ವರ್ಷವೇ.. ..

ಶ್ರೀ ಸಿ.ಎನ್. ಬಾಲಕೃಷ್ಣ:– ಆದ್ಯತೆಯ ಮೇಲೆ ಬೇಡ, ದಯಮಾಡಿ ಈ ಸಾಲಿನಲ್ಲೇ ಕಡ್ಡಾಯವಾಗಿ ತೆಗೆದುಕೊಳ್ಳಬೇಕು.

ಶ್ರೀ ಹೆಚ್. ಆಂಜನೇಯ:– ಇದನ್ನು ಮಾಡುವಾಗ ಮೊದಲನೆಯ ಆದ್ಯತೆ ನಿಮಗೆ ಕೊಡುತ್ತೇವೆ.

5. ವಿಷಯ: ಚಿಕ್ಕಮಗಳೂರು ತಾಲ್ಲೂಕು ಖಾಂಡ್ಯ ಹೋಬಳಿ ಬಿದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಿರಿಗೋಳ, ಅರಿಸಿನಗೆರೆ ಗ್ರಾಮದ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ.

– – –

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ):– ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ತಾಲ್ಲೂಕು ಖಾಂಡ್ಯ ಹೋಬಳಿ ಬಿದರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಶಿರಿಗೋಳ, ಅರಿಸಿನಗೆರೆ ಗ್ರಾಮದ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ತಾಲ್ಲೂಕು ಖಾಂಡ್ಯ ಹೋಬಳಿ ಶಿರಗೊಳ ಗ್ರಾಮದಲ್ಲಿ ಒಟ್ಟು 71 ಎಕರೆ ಅರಣ್ಯ ಭೂಮಿ 7 ಜನರಿಂದ

ಒತ್ತುವರಿಯಾಗಿರುವುದಾಗಿ ಗುರುತಿಸಲಾಗಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 15500/2013 (ಪಿಐಎಲ್) ರಂತೆ ಕ್ರಿಯಾ ಯೋಜನೆ ತಯಾರಿಸಿದ್ದು, ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗಿರುತ್ತದೆ.

ಆದರೆ ಶಿರಗೋಳ ಗ್ರಾಮದ ದಾಖಲೆ ಗ್ರಾಮವಾದ ಅರಶಿನಗಿರಿ ಗ್ರಾಮದಲ್ಲಿ ಕಂದಾಯ ಇಲಾಖೆಗೆ ಸೇರಿದ ಯಾವುದೇ ಜಮೀನು ಒತ್ತುವರಿಯಾಗಿರುವುದನ್ನು ಕ್ರಿಯಾ ಯೋಜನೆಯಲ್ಲಿ ಗುರುತಿಸಿರುವುದಿಲ್ಲ. ಹಾಗೂ ಕಂದಾಯ ಇಲಾಖೆಯಿಂದ ಯಾವುದೇ ರೈತರನ್ನು ಒಕ್ಕಲೆಬ್ಬಿಸಿರುವ ಮತ್ತು ಹಣ ಸುಲಿಗೆಯಂತಹ ಯಾವುದೇ ಪ್ರಕರಣಗಳು ಇದುವರೆವಿಗೂ ವರದಿಯಾಗಿರುವುದಿಲ್ಲ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ನಾನು ಗಮನ ಸೆಳೆದಿದ್ದೇನೆ, ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಈಗ ಇಲ್ಲಿ ಏನಾಗಿದೆಯೆಂದರೆ, ಇದಕ್ಕೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟಿದ್ದಾರೆ. ತಾವು ನನ್ನ ಮೂಲ ಪ್ರಶ್ನೆಯನ್ನು ಗಮನಿಸಲಿಲ್ಲವೆಂದು ಅಂದುಕೊಳ್ಳುತ್ತೇನೆ. ಅಲ್ಲಿರುವಂಥ ಜನರನ್ನು ಒಕ್ಕಲೆಬ್ಬಿಸುತ್ತೇವೆಂದು ಅಧಿಕಾರಿಗಳು .. ..

ಅಧ್ಯಕ್ಷರು:– ಏನು ಹೇಳಿದ್ದಾರೆ?

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ಇವರು ಏನು ಹೇಳುತ್ತಿದ್ದಾರೆಂದರೆ, ಇಲ್ಲ ನಾವು ಆ ರೀತಿ ಯಾರನ್ನೂ ಒಕ್ಕಲೆಬ್ಬಿಸುತ್ತಿಲ್ಲವೆಂದು ಹೇಳಿದ್ದಾರೆ.

ಅಧ್ಯಕ್ಷರು:– ಸರಿ ಇದೆಯಲ್ಲಾ.. .

ಶ್ರೀ ಡಿ.ಎನ್. ಜೀವರಾಜ್:– ಅಲ್ಲಿರುವಂಥ ರೈತರನ್ನು ಅನುದಾನದ ಹೆಸರಿನಲ್ಲಿ ಸುಲಿಗೆ ಮಾಡುತ್ತಿದಾರೆ. ಅವರಿಗೆ ಖಾತೆ ಇದೆ, ಅವರು ಯಾರೂ ದೊಡ್ಡ ರೈತರಲ್ಲ, ಅವರು ಒಂದು ಎಕರೆ, ಎರಡು ಎಕರೆ, ಮೂರು ಎಕರೆ ಇರುವಂಥ ರೈತರಾಗಿದ್ದಾರೆ.

ಅಧ್ಯಕ್ಷರು:– ಖಾತೆ ಇದ್ದರೂ ಒಂದು ಗುಂಟೆ ಜಮೀನು ಇರಬಹುದು.

ಶ್ರೀ ಡಿ.ಎನ್. ಜೀವರಾಜ್:– ಅವರ ಬಳಿ ಖಾತೆ ಇದೆ, ಅವರನ್ನು ಒಕ್ಕಲೆಬ್ಬಿಸುತ್ತೇವೆಂದು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಎರಡೂ ಇಲಾಖೆಯ ಅಧಿಕಾರಿಗಳು ಅವರನ್ನು ಹೆದರಿಸುತ್ತಿದ್ದಾರೆ. ಅವರನ್ನು ಎಬ್ಬಿಸುತ್ತಿರೋ, ಇಲ್ಲವೋ ಎಂದು ಕೇಳಿದ್ದೇನೆ. ಆದರೆ ನೀವು ಬೇರೆ ಉತ್ತರ ಕೊಟ್ಟಿದ್ದೀರಿ.

ಅಧ್ಯಕ್ಷರು:– ಅವರ ಬಳಿ ಖಾತೆ ಇದ್ದರೆ ಏಕೆ ಎಬ್ಬಿಸುವುದಕ್ಕೆ ಹೋಗುತ್ತಾರೆ? ಮಾನ್ಯ ಮಂತ್ರಿಯವರೆ, ಉತ್ತರ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಖಾಂಡ್ಯ ಹೋಬಳಿಯ ಬಿದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಿರಿಗೋಳ ಮತ್ತು ಅರಿಸಿನಗೆರೆ ಗ್ರಾಮದಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂಥ ಭೂಮಿ ಒತ್ತುವರಿಯಾಗುತ್ತಿದೆ ಎಂದು ಇದೆ. ಈ ವಿಷಯವಾಗಿ ತಮಗೆ ಗೊತ್ತಿರುವ ಹಾಗೆ, ಇದು ಹೈಕೋರ್ಟ್‌ಗೆ ಹೋಗಿದೆ. ಈ ಖಾಂಡ್ಯ ಹೋಬಳಿ ಶಿರಿಗೋಳ ಗ್ರಾಮದಲ್ಲಿ 71 ಎಕರೆ ಅರಣ್ಯ ಪ್ರದೇಶದ್ದು ಸುಮಾರು 7 ಜನರಿಂದ ಒತ್ತುವರಿಯಾಗಿದೆ ಎನ್ನುವುದು Public Interest Litigation ಗೆ ಹೋಗಿ ..

ಅಧ್ಯಕ್ಷರು:– ಇದು ಅರಣ್ಯ ಜಮೀನು ಆಗಿದೆಯೇ?

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಹೌದು, ಇದು ಅರಣ್ಯ ಜಮೀನು ಆಗಿದೆ. ಅಲ್ಲಿಂದ ಅದಕ್ಕೆ ಕ್ರಿಯಾ ಯೋಜನೆ ಮಾಡಿ ಮಾಡಿದ್ದಾರೆ. ತಾವು ಪ್ರಸ್ತಾಪ ಮಾಡಿರುವಂಥ ಗ್ರಾಮ.. .

ಶ್ರೀ ಡಿ.ಎನ್. ಜೀವರಾಜ್:– ನನ್ನ ಪ್ರಶ್ನೆ ಅದಲ್ಲ...

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಒಂದು second, ನಾನು ಹೇಳುವುದನ್ನು ಕೇಳಿ, ನೀವು ಮಾತನಾಡಿ, ಇಲ್ಲವೆಂದರೆ ನಾನು ಮಾತನಾಡುತ್ತೇನೆ. ತಾವು specific ಆಗಿ ಅರಿಸಿನಗೆರೆ ಗ್ರಾಮದಲ್ಲಿರುವಂಥ

ಕಂದಾಯ ಇಲಾಖೆಗೆ ಸೇರಿರುವಂಥ ಜಮೀನಿನಲ್ಲಿ ಜನರನ್ನು ಒಕ್ಕಲೆಬ್ಬಿಸುವುದಕ್ಕೆ ಬಹಳ ಕಿರುಕುಳ ಕೊಡುತ್ತಿದ್ದಾರೆಂದು ಹೇಳಿದ್ದೀರಿ. ಅವರನ್ನು ಕ್ರಿಯಾ ಯೋಜನೆಯಲ್ಲಿ ಒಕ್ಕಲೆಬ್ಬಿಸುವಂಥದಕ್ಕೆ ಹೈಕೋರ್ಟ್‌ನಿಂದ ಬಂದಿಲ್ಲ.

ಅಧ್ಯಕ್ಷರು:– ಇದರಲ್ಲಿ ಸರ್ವೆ ನಂಬರ್ ಕೊಟ್ಟಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಆದ್ದರಿಂದ ಮಾನ್ಯ ಜೀವರಾಜ್‌ರವರೆ, ನಿರ್ದಿಷ್ಟವಾದಂಥ ರೀತಿಯಲ್ಲಿ .. ..

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಿಗೆ ಒಂದು ಸಣ್ಣ ಪ್ರಶ್ನೆಯನ್ನು ಕೇಳಿ ಬಿಡುತ್ತೇನೆ ಅಷ್ಟೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಇದು ತಮ್ಮ ಕ್ಷೇತ್ರದ್ದು, ತಮಗೆ ಸಹಾಯ ಮಾಡೋಣವೆಂದರೆ, ತಾವು ನಾನು ಹೇಳಿದ್ದನ್ನು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ಅವರ ಹತ್ತಿರ ನನ್ನದು ಏನೂ dispute ಇಲ್ಲ. ಮಾನ್ಯ ಮಂತ್ರಿಯವರು ಹೇಳುತ್ತಿರುವ ಆ 7 ಜನರ ಬಗ್ಗೆ ನನ್ನ ಪ್ರಸ್ತಾಪವಿಲ್ಲ, ಉಳಿದಿರುವಂಥವರ ಬಗ್ಗೆ ಇವರು ಜಿಲ್ಲಾಧಿಕಾರಿಯವರಿಗೆ ಈ ರೀತಿ ಅನಾವಶ್ಯಕವಾಗಿ ಹಿಂಸೆ ಮಾಡಬಾರದೆಂದು ಒಂದು ಸೂಚನೆಯನ್ನು ಕಳುಹಿಸಲಿ.

ಅಧ್ಯಕ್ಷರು:– ಮಾನ್ಯ ಜೀವರಾಜ್‌ರವರೆ, ಆ ರೀತಿ ಅಲ್ಲ, ನಾನು ಹೇಳುತ್ತೇನೆ, ಕೇಳಿ. ನೀವು ಯಾವ ಸರ್ವೆ ನಂಬರ್, ಎಷ್ಟು ಎಕರೆಯಲ್ಲಿ ಯಾರನ್ನು ಒಕ್ಕಲೆಬ್ಬಿಸುತ್ತಿದ್ದಾರೆ ಎಂಬುದನ್ನು ತಿಳಿಸಿಲ್ಲ.

ಶ್ರೀ ಡಿ.ಎನ್. ಜೀವರಾಜ್:– ಆ ಗ್ರಾಮದ ಬಗ್ಗೆ ಕೇಳಿದ್ದೇನೆ.

ಅಧ್ಯಕ್ಷರು:– ಗ್ರಾಮದ ಬಗ್ಗೆ ಹೇಳುತ್ತಾರೆಯೇ? ಈಗ ನೀವು ಮಾನ್ಯ ಮಂತ್ರಿಯವರಿಗೆ ನಿರ್ದಿಷ್ಟವಾಗಿ ಬರೆದು ಕೊಡಿ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ನಾನು ಒಂದೇ ನಿಮಿಷ ಹೇಳುತ್ತೇನೆ. ನನ್ನದು dispute ಇಲ್ಲ, ತಾವು ತಾಳ್ಮೆಯಿಂದ ಕೇಳಿ.

ಅಧ್ಯಕ್ಷರು:– ನನಗೂ land ವಿಚಾರ ಚೆನ್ನಾಗಿ ಗೊತ್ತಿದೆ. ನೀವು specific ಆಗಿ ಯಾವ ಸರ್ವೆ ನಂಬರ್‌ನಲ್ಲಿ, ಯಾರು ಹಾಳು ಮಾಡುತ್ತಿದ್ದಾರೆ, ಅವರನ್ನು ಬಿಡಿಸುತ್ತಿದ್ದಾರೆಂದು ಹೇಳಿಲ್ಲವೇ?

ಶ್ರೀ ಡಿ.ಎನ್. ಜೀವರಾಜ್:– ಇಡೀ ಊರಿಗೆ ಆ ರೀತಿ ಮಾಡಿದ್ದಾರೆಂದು ಕೇಳುತ್ತಿದ್ದೇನೆ. ಆಯಿತು, ನಾನು ಬರೆದು ಕೊಡುತ್ತೇನೆ. ದಯವಿಟ್ಟು ತಾವು ಜಿಲ್ಲಾಧಿಕಾರಿಗಳಿಗೆ ಸೂಚನೆ ಕಳುಹಿಸಿ.

ಅಧ್ಯಕ್ಷರು:– ಆಯಿತು, ಬರೆದು ಕೊಡಿ. ನಾನು ನೋಡದೇ ಹಾಕಿದ್ದೇ ತಪ್ಪಾಗಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ತಾವು ಶಿರಿಗೋಳ ಗ್ರಾಮದ ಬಗ್ಗೆ ಏನು ಹೇಳಿದ್ದೀರಿ. ಅದರಲ್ಲಿ ಯಾರನ್ನೂ ಒಕ್ಕಲೆಬ್ಬಿಸಿಲ್ಲವೆಂದು ಇದೆ. ಈಗ ಮಾನ್ಯ ಸಭಾಧ್ಯಕ್ಷರು ಹೇಳಿದಂತೆ ಆ ತರಹ ನಿರ್ದಿಷ್ಟವಾದಂಥ ಪ್ರಕರಣಗಳು ಇದ್ದರೆ ತಿಳಿಸಿ, ಅದರ ಬಗ್ಗೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:– ಅವರಿಗೆ ನಿಜವಾಗಲೂ ಮಂಜೂರಾಗಿ, ಖಾತೆ ಇದ್ದರೆ ಅದನ್ನು ತಿಳಿಸಿ, ಒಂದು ವೇಳೆ ಅದು ಅರಣ್ಯವಾಗಿದ್ದರೆ, ಅರಣ್ಯ ಹಕ್ಕು ಕಾನೂನು ಪ್ರಕಾರ ಅರ್ಜಿಯನ್ನು ಕೊಡಿ, endorsement ತೋರಿಸಿ, ಅವರನ್ನು ಯಾರೂ ಬಿಡಿಸುವುದಿಲ್ಲ.

ಶ್ರೀ ಡಿ.ಎನ್. ಜೀವರಾಜ್:– ಆಯಿತು, ತಾವು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟರೆ ಸಾಕು.

ಅಧ್ಯಕ್ಷರು:– ಹೇಗೆ ಕೊಡುತ್ತಾರೆ? ಯಾವ ಸರ್ವೆ ನಂಬರ್, ಯಾರು ಮಾಡಿಕೊಂಡಿದ್ದಾರೆ? ಏನು ಹೇಳುವುದು ಬೇಡವೇ?

ಶ್ರೀ ಡಿ.ಎನ್. ಜೀವರಾಜ್:– ಆ ವಿವರ ಕೊಡುತ್ತೇನೆ. ಆದರೆ ಇಡೀ ಊರಿನಲ್ಲೇ ಆ ಸಮಸ್ಯೆ ಇದೆ.

ಅಧ್ಯಕ್ಷರು:– ಕೊಡಿ. ಶ್ರೀ ಹೆಚ್.ಎಸ್. ಪ್ರಕಾಶ್, ಶ್ರೀ ಹೆಚ್.ಡಿ. ರೇವಣ್ಣ ಮತ್ತು ಶ್ರೀ ಹೆಚ್.ಕೆ. ಕುಮಾರಸ್ವಾಮಿ ಇಲ್ಲಿ ಯಾರೂ ಇಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈ ಗಮನ ಸೆಳೆಯುವ ಸೂಚನೆ ಮಾನ್ಯ ಹೆಚ್.ಎಸ್. ಪ್ರಕಾಶ್ ಮತ್ತು ಮಾನ್ಯ ಹೆಚ್.ಡಿ. ರೇವಣ್ಣ ಮತ್ತು ನನ್ನ ಹೆಸರಿನಲ್ಲಿದೆ. ಈ ವಿಷಯಕ್ಕೆ ಸರ್ಕಾರದಿಂದ ಉತ್ತರ ಬಂದಿಲ್ಲ.

ಅಧ್ಯಕ್ಷರು:– ಇದಕ್ಕೆ ಸರ್ಕಾರದಿಂದ ಉತ್ತರ ಬಂದಿಲ್ಲ. ತಾವು ಕೊಡುವ ವಿಷಯ specific ಆಗಿರಬೇಕು. ಯಾವ ಗ್ರಾಮದ ಯಾವ ಸರ್ವೆ ನಂಬರ್‌ನಲ್ಲಿ ಎಂದು ತಿಳಿಸದೇ ಹೋದರೆ ಅಧಿಕಾರಿಗಳು ಹೇಗೆ report ಕಳುಹಿಸುತ್ತಾರೆ? ಹೇಗೆ ಉತ್ತರ ಹೇಳುತ್ತಾರೆ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಉತ್ತರ ಕೊಟ್ಟರೆ ಸಾಕು.

ಅಧ್ಯಕ್ಷರು:– ಆಯಿತು, ಉತ್ತರ ಕೊಡುತ್ತಾರೆ ಬಿಡಿ. ಇನ್ನು ಮಾನ್ಯ ಬಿ.ವೈ. ರಾಘವೇಂದ್ರ.

(ಮಾನ್ಯ ಬಿ.ವೈ. ರಾಘವೇಂದ್ರರವರು ಸಭೆಯಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು:– ಮಾನ್ಯ ಎಂ. ಕೃಷ್ಣಾರೆಡ್ಡಿರವರೆ ತಮ್ಮ ವಿಷಯ ಪ್ರಸ್ತಾಪಿಸಿ.

6. ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ.

– – –

ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ):– ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ